## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 819/2015

ಸಾಕ್ಷಿಗೆ ದಿನಾಂಕ 26-02-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 35 P.W.: 9

| | | |
|---|---|---|
| ಹೆಸರು | : | ಸಿ ನಾಗಪ್ಪ |
| ತಂದೆಯ ಹೆಸರು | : | ಚಿನ್ನಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಪಿ ಐ, ಬೆಳ್ಳಂದೂರು ಸಂಚಾರ ಪೋ ಠಾಣೆ |
| ವಾಸ ಸ್ಥಳ | : | ಬೆಂಗಳೂರು |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 04-11-2012 ರಿಂದ 31-01-2015 ರವರೆಗೆ ತಂಬ್ರಹಳ್ಳಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 22-12-2013 ರಂದು ಚಾಸಾ-34 ರವರಿಂದ ಕಡತವನ್ನು ಪಡೆದುಕೊಂಡು ಮುಂದಿನ ತನಿಖೆ ಕೈಗೊಂಡಿರುತ್ತೇನೆ. ಕಡತದಲ್ಲಿ ನಾನು ಪಿರ್ಯಾದಿ, ಪ್ರ ವ ವರದಿ, ಪಂಚನಾಮೆ ಮತ್ತು ಇತರೆ ದಾಖಲೆಗಳನ್ನು ಪಡೆದಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು, ಕೃತ್ಯಸ್ಥಳದ ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-1 ರಿಂದ 3 ಎಂದು ಗುರುತಿಸಲಾಗಿದೆ. ಸಾಕ್ಷಿಯು ಪ್ರ ವ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-28 ಎಂದು ಗುರುತಿಸಲಾಯಿತು. ದಿಃ23-12-2013 ರಂದು ಸಾಕ್ಷಿದಾರರಾದ ಚಾಸಾ-9 ರಿಂದ 19 ರವರ ಹೇಳಿಕೆ ಪಡೆದಿದ್ದೇನೆ. ನಂತರ ದಿಃ25-03-2014 ರಂದು ವೈದ್ಯಾಧಿಕಾರಿಗಳು, ಪ್ರಾ ಆ ಕೇಂದ್ರ ತಂಬ್ರಹಳ್ಳಿ ಇವರಿಂದ ಚಾಸಾ-1 ಮತ್ತು 7 ರವರ ಗಾಯದ ಪ್ರಮಾಣಪತ್ರಗಳನ್ನು ಪಡೆದಿರುತ್ತೇನೆ. ಸಾಕ್ಷಿಯು ಸದರಿ ಗಾಯದ ಪ್ರಮಾಣಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-13 ಮತ್ತು 12 ಎಂದು ಗುರುತಿಸಲಾಗಿದೆ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-12 ಬಿ ಮತ್ತು 13 ಬಿ ಎಂದು ಗುರುತಿಸಲಾಯಿತು. ದಿಃ23-12-2013 ರಂದು ಚಾಸಾ-11, 12, 17, 15, 18, 16 ಇ ಎಂ ಓ ಪೇಮೆಂಟ್ ಶೀಟ್ಸಗಳನ್ನು ಪಡೆದಿರುತ್ತೇನೆ. ದಿಃ02-07-2014 ರಂದು ಚಾಸಾ-21, 22 ಮತ್ತು 20 ರವರ ಇ ಎಂ ಓ ಪೇಮೆಂಟ್ ಶೀಟ್ಸಗಳನ್ನು ಪಡೆದಿರುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-29 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ

ಸಹಿಯನ್ನು ಒಟ್ಟಾರೆಯಾಗಿ ನಿಪಿ-29 ಎ ಎಂದು ಗುರುತಿಸಲಾಯಿತು. ನಂತರ ದಿಃ02-07-2014 ರಂದು ಚಾಸಾ-20 ರಿಂದ 22 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಅದೇ ದಿನ ಚಾಸಾ-29 ರವರಿಂದ ಫಲಾನುಭವಿಗಳು ಮತ್ತು ಸಾಕ್ಷಿದಾರರ ಪೇಮೆಂಟ್ ಶೆಡ್ಯೂಲ್ ಗಳನ್ನು ಪಡೆದಿರುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-16 ರಿಂದ 26 ಎಂದು ಗುರುತಿಸಲಾಗಿದೆ ಅವುಗಳ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-16 ಬಿ ರಿಂದ 26 ಬಿ ಎಂದು ಗುರುತಿಸಲಾಯಿತು.

ದಿಃ28-07-2014 ರಂದು ಫಲಾನುಭವಿಗಳಿಗೆ ಸೆಪ್ಟಂಬರ್ ತಿಂಗಳು ಮಂಜೂರು ಮಾಡಿದ ಹಣದ ಬಗ್ಗೆ ಜಿಲ್ಲಾಧಿಕಾರಿಗಳ ಆದೇಶದ ಜೆರಾಕ್ಸ ಪ್ರತಿಯೊಂದಿಗೆ ಉಪ ತಹಶೀಲ್ದಾರರು ಹಂಪಸಾಗರ ಅವರು ನೀಡಿದ ಪತ್ರ ಮತ್ತು ದಾಖಲಾತಿಗಳನ್ನು ಪಡೆದಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-30 ಎಂದು ಮತ್ತು ಸಹಿಯನ್ನು ನಿಪಿ-30 ಎ ಎಂದು ಗುರುತಿಸಲಾಯಿತು. ಅದೇ ದಿನಾಂಕದಂದು ಚಾಸಾ-23 ಮತ್ತು 24 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ದಿಃ20-08-2014 ರಂದು ಚಾಸಾ-25 ಮತ್ತು 26 ರವರ ಹೇಳಿಕೆ ಪಡೆದಿದ್ದೇನೆ. ನಂತರ ದಿಃ30-01-2015 ರಂದು ಆರೋಪಿಯ ಸೇವಾ ನೇಮಕಾತಿಯನ್ನು ಪಡೆದಿರುತ್ತೇನೆ ಅದನ್ನು ಈಗಾಗಲೇ ನಿಪಿ-14 ಮತ್ತು 15 ಎಂದು ಗುರುತಿಸಲಾಗಿದೆ. ನಿಪಿ-14 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-14 ಬಿ ಎಂದು ಗುರುತಿಸಲಾಯಿತು. ಆರೋಪಿತನು ಫಲಾನುಭವಿಗಳಿಗೆ ಸರ್ಕಾರದಿಂದ ಮಂಜೂರಾದ ಹಣವನ್ನು ಪಾವತಿಸದೇ ತನ್ನ ಸ್ವಂತಕ್ಕೆ ದುರ್ಭಳಕೆ ಮಾಡಿಕೊಂಡಿದ್ದು ಸರ್ಕಾರಕ್ಕೆ ಮತ್ತು ಫಲಾನುಭವಿಗಳಿಗೆ ವಂಚಿಸಿರುತ್ತಾರೆ ಮತ್ತು ಇದನ್ನು ಪ್ರಶ್ನಿಸಿದ ಚಾಸಾ-1 ಮತ್ತು 7 ರವರ ಮೇಲೆ ಹಲ್ಲೆ ಮಾಡಿ ಜೀಬೆದರಿಕೆ ಹಾಕಿ, ಅವರನ್ನು ಅಕ್ರಮ ತಡೆ ಒಡ್ಡಿರುತ್ತಾನಂತಾ ಸಾಕಷ್ಟು ಸಾಕ್ಷ್ಯಧಾರಗಳು ಲಭ್ಯವಾಗಿದ್ದರಿಂದ ಅವನ ವಿರುದ್ಧ ಅಂತಿಮ ವರದಿ ಸಲ್ಲಿಸಿರುತ್ತೇನೆ. ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ ಅವನು ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ.

ಪಾಟೀ ಸವಾಲು. ಆರೋಪಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಫಲಾನುಭವಿಗಳು ವೈಯಕ್ತಿಕವಾಗಿ ಆರೋಪಿ ವಿರುದ್ಧ ನಮ್ಮ ಠಾಣೆಯಲ್ಲಿ ದೂರು ನೀಡಿಲ್ಲ. ಚಾಸಾ-1 ಮತ್ತು ಆರೋಪಿ ಸಂಬಂಧಿಕ ಎಂದರೆ ಸರಿಯಲ್ಲ. ಚಾಸಾ-1 ಮತ್ತು ಆರೋಪಿ ನಡುವೆ ಇರುವ ವೈಯಕ್ತಿಕ ದ್ವೇಷದ ಮೇರೆಗೆ ಚಾಸಾ-1 ರವರು ಆರೋಪಿ ವಿರುದ್ಧ ಒಂದು ಸುಳ್ಳು ದೂರು ನೀಡಿದ್ದು ಇರುತ್ತದೆ ಅದಕ್ಕೆ ಸಂಬಂಧಿಸಿದಂತೆ ನಾನು ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಮೇಲೆ ಹೇಳಿದಂತೆ ಯಾವುದೇ ದಾಖಲೆಗಳನ್ನು

ಪಡೆದುಕೊಂಡಿರುವುದಿಲ್ಲ, ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ, ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ದಾಖಲಾತಿಗಳನ್ನು ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು ಸುಳ್ಳು ಅಂತಿಮ ವರದಿಯನ್ನು ಆರೋಪಿ ವಿರುದ್ಧ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಅಂಚೆ ಇಲಾಖೆಯವರು ಆರೋಪಿತನು ವಂಚನೆ ಮಾಡಿರುತ್ತಾನಂತಾ ನಮ್ಮ ಠಾಣೆಗೆ ಯಾವುದೇ ದೂರು ನೀಡಿಲ್ಲ. ಆರೋಪಿತನು ಚಾಸಾ-1 ಮತ್ತು 7 ರವರ ಮೇಲೆ ಯಾವುದೇ ರೀತಿಯಲ್ಲಿ ಹಲ್ಲೆ ಮಾಡಿಲ್ಲ, ಜೀವ ಬೆದರಿಕೆ ಹಾಕಿಲ್ಲ, ಚಾಸಾ-4 ರವರಿಗೆ ಯಾವುದೇ ರೀತಿಯಿಂದ ಯಾವುದೇ ಮಹಿಳೆಗೆ ಅವಮಾನ ಮಾಡಿಲ್ಲವೆಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಆದರೂ ಸಹಾ ಅವನ ವಿರುದ್ಧ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು ಮಾಲಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ